# ಇವಗೇಕೆ ಪರಿಮಳ ಇವಗೇಕೆ ಶೃಂಗಾರ

1. **Ref.:** Shri Purandara Dasara Sahitya Part – 4, Krishna Leele, edited by Shri Betageri Krishna Sharma and Shri Bengeri Huchhu Rayaru, page No. 121
2. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 76
3. **Note:** Lyrics given here are as per Ref. 1. The wordings in Ref. 2 are almost same and the differences are not considered here.
4. **Note:** Singer has followed these lyrics.

ರಾಗ: ಯದುಕುಲಕಾಂಭೋಜಿ ತಾಳ: ತ್ರಿಪುಟ

ಇವಗೇಕೆ ಪರಿಮಳ ಇವಗೇಕೆ ಶೃಂಗಾರ ॥ ಪ ॥
ನವನೀತ ಚೋರ ನಾರುವ ಗೊಲ್ಲಗೆ ॥ ಅಪ ॥

ಹೊಲಸು ಮೈಯವಗೇಕೆ ಹೊಸ ಕಸ್ತೂರಿಯ ಲೇಪ
ತಲೆದೋರುವವಗೇಕೆ ದಟ್ಟ ಪುನುಗು
ಬಲು ಕೇಶದವಗೇಕೆ ಬಾವನ್ನದ ಲೇಪ
ಸಲೆ ಘೋರ ರೂಪಿಗೇಕೆ ನೊಸಲ ಸಾದು ॥ 1 ॥

ತುಲಸಿ ಮಾಲೆಯ ಧರಿಸಿದವಗೇಕೆ ಜವ್ವಾಜಿ
ಕೊಲೆಗಡುಕಗೇಕೆ ಕುಂಕುಮ ತಿಲಕ
ಅಲೆದಾಡುವವಗೇಕೆ ಅಂಗರಾಗದ ಸುಖ
ಕಳವು ಮಾಡುವವಗೇಕನಂಗ ಸೊಬಗು ॥ 2 ॥

ಪರಸತಿಯ ಬಯಸುವಗೆ ಪನ್ನಗ ಶಯನವೇಕೆ
ಹರಿದಾಡುವನಿಗೇಕೆ ಅಡಪ-ಡವಿಕೆ
ಸಿರಿದೇವಿ ಶೃಂಗಾರಗೈದು ವರಿಸಿದ ಬಳಿಕ
ಧರೆಗಧಿಕನಾದನೀ ಪುರಂದರ ವಿಠಲ ॥ 3 ॥

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

**ಬಾವನ್ನದ** = ಶ್ರೀಗಂಧದ, ಚಂದನದ

**ಲೇಪ** = ಮೆರಗು

**ನೊಸಲು** = ಹಣೆ

**ಜವ್ವಾಜಿ** = ಒಂದು ಬಗೆಯ ಸುಗಂಧ ದ್ರವ್ಯ

**ಅಂಗರಾಗ** = ಸ್ನಾನದ ನಂತರ ದೇಹಕ್ಕೆ ಲೇಪಿಸುವ ಸುಗಂಧ ದ್ರವ್ಯ

**ಅಡಪ** = ಹಡಪ, ಕೆಲಸಿಗರವನ ಸಾಮಾನುಗಳ ಪೆಟ್ಟಿಗೆ

**ಡವಕೆ** = ಪೀಕದಾಣಿ, ಉಗುಳುವ ಪಾತ್ರೆ

**Classification:** Keerthane
**Ankita:** purandara vittala
**Location:** NA
**Category:** Krishna Leele
**Sub-Category:** Krishna, benne, kalla, Kasturi, gandha, tulasi, sukha, patni, Lakshmi, bhumi, loka,
**Pravachana:** NA
**Explanation:** NA